## ಹಿರಿಯ ಸಿವಿಲ್ ನ್ಯಾಯಾಧೀಶರು  ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,  ತಿ.ನರಸೀಪುರ

**ಸಿಸಿ ಸಂಖ್ಯೆ 199/2020**

CW-2/PW-3

| | | |
|---|---|---|
| ಹೆಸರು | : | ಮಹದೇವ |
| ತಂದೆ/ಗಂಡನ ಹೆಸರು | : | ಲೇಟ್ ರಾಮ |
| ವಯಸ್ಸು | : | 40 ವರ್ಷ |
| ವೃತ್ತಿ | : | ಪೌರಕಾರ್ಮಿಕ |
| ವಾಸ ಸ್ಥಳ | : | ಪುರಸಭೆ, ತಿ.ನರಸೀಪುರ |
| ದಿನಾಂಕ | : | **14-11-2022** |

ಸಾಕ್ಷಿದಾರರಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ನಾನು ತಿ.ನರಸೀಪುರದ ಪುರಸಭೆಯಲ್ಲಿ ಪೌರಕಾರ್ಮಿಕನಾಗಿ ಕಳೆದ 5 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಚಾಸಾ-1 ಮತ್ತು 3 ರವರು ಗೊತ್ತು. ದಿನಾಂಕ 04/01/2019 ರಂದು ನನ್ನನ್ನು ಮತ್ತು ಚಾಸಾ-1 ಮತ್ತು 3 ರವರನ್ನು ಸ್ವಚ್ಛತೆ ಕೆಲಸ ಮಾಡುವಂತೆ ತಿ.ನರಸೀಪುರದ ತ್ರಿವೇಣಿ ನಗರದ ವಾರ್ಡ್ ನಂ.5 ಕ್ಕೆ ನೇಮಕ ಮಾಡಿದ್ದರು. ಆ ದಿವಸ ನಾನು ಮತ್ತು ಚಾಸಾ-1 ರವರು ಅಕ್ಕಪಕ್ಕದ ಮೋರಿಗಳನ್ನು ಸ್ವಚ್ಛ ಮಾಡುತ್ತಿದ್ದೆವು. ಆ ದಿವಸ ಬೆಳಗ್ಗಿನ 6 ಗಂಟೆಗೆ ಕೆಲಸ ಮಾಡಲೆಂದು ನಾವುಗಳು ಹೋಗಿದ್ದೆವು. ಬೆಳಗ್ಗಿನ ಸುಮಾರು 8.45 ಅಥವಾ 9 ಗಂಟೆ ಸುಮಾರಿಗೆ ಒಬ್ಬರು ಚಾಸಾ-1 ರವರ ಜೊತೆಗೆ ಗಲಾಟೆ ಮಾಡುತ್ತಿದ್ದಾರೆ ಮತ್ತು ಅವರನ್ನು ಹೊಡೆಯುತ್ತಿದ್ದಾರೆ ಎಂದು ಯಾರೋ ಒಬ್ಬ ಸಾರ್ವಜನಿಕರು ತಿಳಿಸಿದರು. ವಿಷಯ ತಿಳಿದು

ನಾನು ಘಟನಾ ಸ್ಥಳಕ್ಕೆ ಓಡಿಹೋದೆನು. ನಾನು ಸ್ಥಳಕ್ಕೆ ಹೋದಾಗ ನ್ಯಾಯಾಲಯದಲ್ಲಿರುವ ಆರೋಪಿತರು ಚಾಸಾ–1 ರವರ ಬಟ್ಟೆಯನ್ನು ಹಿಡಿದು ಎಳೆದು ಹರಿದು ಹಾಕಿ ಮುಖವನ್ನು ಪರಚಿಕೊಳ್ಳುತ್ತಿದ್ದನು. ಅದೇ ರೀತಿ ಆರೋಪಿತರು ಚಾಸಾ–1 ರವರನ್ನು ಬಾಯಿಗೆ ಬಂದ ಹಾಗೆ ಬೋಳಿ ಮಗನೇ, ಸೂಳೇಮಗನೇ ಎಂದು ಬೈಯುತ್ತಿದ್ದರು. ಆರೋಪಿತರು ಚಾಸಾ–1 ರವರಿಗೆ ಕೈಯಿಂದಲೇ ಹೊಡೆದರು. ಆ ಸಮಯದಲ್ಲಿ ನಾನು ಮತ್ತು ಚಾಸಾ–3 ರವರು ಧಾವಿಸಿ ಚಾಸಾ–1 ಮತ್ತು ಆರೋಪಿತರನ್ನು ಬೇರ್ಪಡಿಸಿದೆವು. ನಂತರ ತಿ.ನರಸೀಪುರ ಪುರಸಭೆಯ ಮುಖ್ಯಾಧಿಕಾರಿಗಳಿಗೆ ಕರೆಮಾಡಿ ವಿಷಯವನ್ನು ತಿಳಿಸಿದೆವು. ಆ ಸಮಯದಲ್ಲಿ ಆರೋಗ್ಯ ಅಧಿಕಾರಿಗಳು ಸ್ಥಳಕ್ಕೆ ಬಂದರು. ಚಾಸಾ–1 ರವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ತದನಂತರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿರುತ್ತೇವೆ. ಮೋರಿಯನ್ನು ಸ್ವಚ್ಛತೆ ಮಾಡುವಾಗ ಮೋರಿಯ ನೀರು ಆರೋಪಿತರ ಮನೆಯ ಮುಂದೆ ಚೆಲ್ಲಿದ ಕಾರಣ ಗಲಾಟೆಯಾಗಿದೆ ಎಂದು ತಿಳಿದುಬಂದಿರುತ್ತದೆ. ಈ ಘಟನೆಯ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ.

ಘಟನೆಯಾದ ದಿವಸವೇ ಮಧ್ಯಾಹ್ನ 1 ಗಂಟೆ ಸುಮಾರಿಗೆ ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದರು. ಪೊಲೀಸರಿಗೆ ಚಾಸಾ–1, ನಾನು ಮತ್ತು 3 ಇವರು ಘಟನಾ ಸ್ಥಳವನ್ನು ತೋರಿಸಿದೆವು. ಪೊಲೀಸರು ಸ್ಥಳದಲ್ಲಿ ಬರವಣಿಗೆ ಮಾಡಿಕೊಂಡು ನನ್ನ ಸಹಿ ಪಡೆದರು. ನಾನು ಈಗ ಪಂಚನಾಮೆಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ಮಧ್ಯಾಹ್ನ 1 ರಿಂದ 1.30 ರವರೆಗೆ ಪಂಚನಾಮೆ ಮಾಡಿರುತ್ತಾರೆ. ಆರೋಪಿತರು ಚಾಸಾ–1 ರವರ ಜೊತೆಗೆ ಗಲಾಟೆ ಮಾಡಿ ಹೊಡೆದಿದ್ದರಿಂದ ಸರ್ಕಾರಿ ಕೆಲಸಕ್ಕೆ ಅಡ್ಡಿವುಂಟಾಗಿರುತ್ತದೆ.

(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜನೆಗೆ ಭಾಗಶಃ ವಿರುದ್ಧವಾಗಿ ಸಾಕ್ಷ್ಯ ನುಡಿಯುತ್ತಿದ್ದಾರೆ ಎಂದು ಹೇಳಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ.ರವರು ಅನುಮತಿಯನ್ನು ಕೇಳಿರುತ್ತಾರೆ. ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಘಟನೆಯ ದಿವಸ ಆರೋಪಿತರು ಚಾಸಾ–1 ರವನ್ನು ಅಡ್ಡಗಟ್ಟಿ ನಿಲ್ಲಿಸಿದರು ಎಂದರೆ ನಿಜ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಿ.ಕೆ. ವಕೀಲರಿಂದಃ**

ಘಟನೆಯ ಬಗ್ಗೆ ಆ ದಿವಸ ಬೆಳಗ್ಗಿನ 9 ಅಥವಾ 9.10 ಕ್ಕೆ ನಾವು ಮುಖ್ಯಾಧಿಕಾರಿಯವರಿಗೆ ವಿಷಯವನ್ನು ತಿಳಿಸಿದೆವು. ಮುಖ್ಯಾಧಿಕಾರಿಗಳ ಆದೇಶದ ಮೇರೆಗೆ ಆರೋಗ್ಯಾಧಿಕಾರಿಗಳು ಬೆಳಿಗ್ಗೆ 9.45 ಗಂಟೆಗೆ ಬಂದಿದ್ದರು. ಆ ದಿವಸ ಕರ್ತವ್ಯ ನಿರ್ವಹಿಸಲು ಬೆಳಗ್ಗಿನ ಜಾವ ನಾನು, ಚಾಸಾ–1 ಮತ್ತು ಚಾಸಾ–3 ರವರು ಕಛೇರಿಯಿಂದ ಒಟ್ಟಿಗೆ ಬಂದಿದ್ದೆವು. ನಾನು ಪಕ್ಕದ ಬೀದಿಯಲ್ಲಿ ಕೆಲಸ ಮಾಡುತ್ತಿದ್ದೆನು. ಚಾಸಾ–1 ರವರು ಇನ್ನೊಂದು ಬೀದಿಯಲ್ಲಿ ಕೆಲಸ ಮಾಡುತ್ತಿದ್ದರು. ಘಟನೆಯ ವಿಷಯವನ್ನು ನನಗೆ ತಿಳಿಸಿದ ವ್ಯಕ್ತಿಯ ಹೆಸರು ಗೊತ್ತಿಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ 8.45 ಅಥವಾ 9 ಗಂಟೆ ಸಮಯವಾಗಿರಬಹುದು. ನಾನು ಹೋಗುವ ಮುಂಚೆ ಎಷ್ಟು ಗಂಟೆಗೆ ಘಟನೆ ಪ್ರಾರಂಭವಾಗಿತ್ತು ಎಂದು ಗೊತ್ತಿಲ್ಲ. ನಾನು ಸ್ಥಳಕ್ಕೆ ಹೋದಾಗ ಚಾಸಾ–1 ಮತ್ತು ಆರೋಪಿತರು ಒಬ್ಬರನ್ನೊಬ್ಬರು ಇನ್ನೂ ಹಿಡಿದುಕೊಂಡಿದ್ದರು. ಗಲಾಟೆಯ ಸಮಯದಲ್ಲಿ ಆರೋಪಿತರ ತಾಯಿ ಕೂಡ ಅಲ್ಲಿ ಹಾಜರಿದ್ದರು. ಚಾಸಾ–1 ಇವರ ಜೊತೆಗೆ ಯಶವಂತ ಎನ್ನುವ ಹುಡುಗ ಕೂಡ ಇದ್ದನು. ವಿಷಯ ತಿಳಿದು ನಾನು ಮತ್ತು ಚಾಸಾ–3 ರವರು ಘಟನಾ ಸ್ಥಳಕ್ಕೆ ಧಾವಿಸಿದೆವು. ಇದಾದ ನಂತರ ಆರೋಗ್ಯಾಧಿಕಾರಿ ಮತ್ತು ನಮ್ಮ ಇತರೆ ಸಹೋದ್ಯೋಗಿಗಳು ಅಲ್ಲಿಗೆ ಬಂದರು.

ಆ ದಿವಸ ಚಾಸಾ–1 ರವರನ್ನು ಆರೋಗ್ಯಾಧಿಕಾರಿಗಳು ಆಸ್ಪತ್ರೆಗೆ ಕರೆದುಕೊಂಡು ಹೋದರು. ಅವರು ಆಸ್ಪತ್ರೆಯಲ್ಲಿ ಎಷ್ಟು ಸಮಯದವರೆಗೆ ಇದ್ದರು ಎಂದು ಗೊತ್ತಿಲ್ಲ. ನಾನು ನೋಡಿದಾಗ ಚಾಸಾ–1 ರವರ ಮುಖದಲ್ಲಿ ಕಣ್ಣಿನ ಕೆಳಗೆ, ಕಪಾಳಿನ ಮೇಲೆ ಹೀಗೆ ಒಟ್ಟು 4–5 ಕಡೆ ಗಾಯಗಳು ಆಗಿದ್ದವು. ಮೋರಿಯನ್ನು ಸ್ವಚ್ಛಗೊಳಿಸಿದ ನಂತರ

ಮೋರಿ ನೀರು ಆರೋಪಿತರ ಮನೆಯ ಮುಂದೆ ಎರಚಿದೆ ಎನ್ನುವ ಕಾರಣಕ್ಕೆ ಗಲಾಟೆಯಾಗಿರುತ್ತದೆ ಎಂದು ನನಗೆ ತಿಳಿದು ಬಂದಿರುತ್ತದೆ. ಸಾಮಾನ್ಯವಾಗಿ ಮೋರಿಯಿಂದ ಕಸವನ್ನು ಎತ್ತುವಾಗ ಪಕ್ಕದಲ್ಲಿ ನೀರು ಸುರಿಯುತ್ತದೆ ಎಂದರೆ ನಿಜ. ಆರೋಪಿತರ ಮನೆ ಮುಂದೆ 4-5 ಅಡಿ ನಂತರ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ಆದರೆ ಕಂಪೌಂಡು ಗೋಡೆಯ ಪಕ್ಕದಲ್ಲಿಯೇ ಮೋರಿ ಇರುತ್ತದೆ. ಆರೋಪಿತರ ಗೇಟಿನಿಂದ ಮನೆಯ ಮುಂಭಾಗಿಲು 4-5 ಅಡಿ ಅಂತರದಲ್ಲಿ ಇದೆ ಎಂದರೆ ನಿಜ.

ಚಾಸಾ-1 ರವರು ಕೆಲಸ ಮಾಡುತ್ತಿದ್ದಾಗ ಮದ್ಯಸೇವನೆ ಮಾಡಿದ್ದರು ಎಂದರೆ ಸುಳ್ಳು. ಮದ್ಯದ ಅಮಲಿನಲ್ಲಿ ಆರೋಪಿತರ ತಾಯಿಗೆ ಚಾಸಾ-1 ರವರು ಏಕವಚನದಲ್ಲಿ ಮಾತನಾಡಿದಾಗ ಆರೋಪಿತರು ಕೇಳಲು ಬಂದಿದ್ದರು ಎಂದರೆ ಸರಿಯಲ್ಲ. ಚಾಸಾ-1 ರವರೇ ಆರೋಪಿತರನ್ನು ಹೊಡೆಯಲು ಹೋಗಿ ಆಯತಪ್ಪಿ ಬಿದ್ದು ಗಾಯಗೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾವುಗಳೆಲ್ಲ ಬಂದು ಆರೋಪಿತರನ್ನು ಹೊಡೆದು ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಘಟನೆಯ ನಂತರ ನನ್ನನ್ನು ಕೂಡ ಪೊಲೀಸ್ ಠಾಣೆಗೆ ಕರೆದಿದ್ದರು ಎಂದರೆ ಸುಳ್ಳು.

ನಾನು ಹೇಳುವಂತೆ ಯಾವುದೇ ಘಟನೆ ಆಗದೇ ಇದ್ದರೂ ಕೂಡ ಮದ್ಯಸೇವನೆಯ ಅಮಲಿನಲ್ಲಿ ಚಾಸಾ-1 ರವರು ಆಯತಪ್ಪಿ ಬಿದ್ದು ಗಾಯಗೊಂಡಿದ್ದಾರೆ ಎಂದರೆ ಸರಿಯಲ್ಲ. ಬೇರೆಯವರ ಮಾತನ್ನು ಕೇಳಿ ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿ ಈ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೌರಕಾರ್ಮಿಕನಾಗಿರುವುದರಿಂದ ಪೊಲೀಸರ ಜೊತೆಗೆ ಚನ್ನಾಗಿ ಪರಿಚಯ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ನಾನು, ನಮ್ಮ ಕಛೇರಿಯವರು ಮತ್ತು ಪೊಲೀಸರು ಎಲ್ಲರೂ ಸೇರಿಕೊಂಡು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಯಾವುದೇ ಸ್ಥಳಕ್ಕೆ ಹೋಗದೇ ಠಾಣೆಯಲ್ಲಿಯೇ ತಯಾರಿಸಿದ ನಿ.ಪಿ.2 ಮಹಜರಿಗೆ ಸಹಿ ಮಾತ್ರ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಪೌರಕಾರ್ಮಿಕರ ಸಂಘದ ಸದಸ್ಯರೆಲ್ಲ ಸೇರಿಕೊಂಡು ಪೊಲೀಸರ ಮೇಲೆ ಒತ್ತಡ ತಂದು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಆರೋಪಿತರು ಚಾಸಾ–1 ರವರ ಕರ್ತವ್ಯಕ್ಕೆ ಅಡ್ಡಿಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ಸಾಕ್ಷಿದಾರರ ಹೇಳಿಕೆಯನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.